ಶ್ರೀ ರತ್ನಕುಮಾರ್ ಕಟ್ಟೀಮಾರ್.—ಬರುವ ಜೂನ್ ತಿಂಗಳಲ್ಲಿ ನಮ್ಮ ದಕ್ಷಿಣ ಕನ್ನಡಕ್ಕೆ ಎಷ್ಟು ಆಹಾರಧಾನ್ಯ ಕೊಡುತ್ತೀರಿ ಎಂಬುದನ್ನು ಈ ಸಭೆಯ ಸದಸ್ಯರಿಗೆ ತಿಳಿಸುತ್ತಿರಾ? ಮತ್ತು ಡಿವ್ಯಾಂಡಿಗೆ ಅನುಗುಣವಾಗಿ ನೀವು ಎಷ್ಟು ಯಾವ ಸೊಸೈಟಿಗೆ ಹಂಚುತ್ತೀರಿ ಎಂಬುದನ್ನೂ ಈ ಸಭೆಯ ಸದಸ್ಯರಿಗೆ ಸರ್ಕ್ಯುಲರ್ ಮೂಲಕ ತಿಳಿಸುವಿರಾ ?

ಶ್ರೀ ಬಿ. ಡಿ. ಜತ್ತಿ.—ನಾವು ಡಿಸ್ಟ್ರಿಬ್ಯೂಷನ್ ಅರೇಂಜ್‌ಮೆಂಟು ಮಾಡುತ್ತೇವೆ. ಪ್ರತಿಯೊಂದು ತಿಂಗಳದೂ ಬೇಕಾದರೆ ತಿಳಿಸುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೇಚೆ ಪ್ರದೇಶದಲ್ಲಿ ಜಾಸ್ತಿ ಕೊಡುತ್ತೀರಿ. ದಕ್ಷಿಣ ಕನಡಾದ ಪರಿಸ್ಥಿತಿಯೇ ಬೇರೆ ಇದೆ. ಇಲ್ಲಿ ಜಾಸ್ತಿ ಪೆನೆಂಟ್ಸ್ ಇರುವುದರಿಂದ ಅವರಲ್ಲಿ ಮಳೆಗಾಲದಲ್ಲಿ ಏನೂ ಇರುವುದಿಲ್ಲ. ಬೆಳೆದವರಿಗೆ ಉಣ್ಣಲು ಏನೂ ಇರುವುದಿಲ್ಲವಾದ್ದರಿಂದ ಮಳೆಗಾಲದ 4 ತಿಂಗಳು ಗಳಲ್ಲಿ ಹಳ್ಳಿಗಳಿಗೆ ವಸೂಲಾದದ್ದರಲ್ಲಿ ಅಕ್ಕಿ ಒದಗಿಸುವಿರಾ ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಜಿಲ್ಲೆಗೆ ಒಂದು ಅಡ್‌ಹಾಕ್ ಕೋಟಾ ಡೆಪ್ಯುಟಿ ಕಮಿಷನರಿಗೆ ಕೊಡುತ್ತೇವೆ. ಅದರಲ್ಲಿ ಅವರು ಹಂಚುವುದಕ್ಕೆ ಅವಕಾಶವಿದೆ.

## Board of Directors of Hutti Gold Mines

575. Smt. BASAVARAJESWARI (Manvi).—

Will the Minister for Finance, Planning, Commerce and Industries be pleased to state :—

(*a*) whether any statutory or Legislative provisions are prescribed for constituting the Board of Directors of the Hutti Gold Mines Company Ltd.;

(*b*) if so, who is empowered to appoint the Directors other than Government representations in the Board;

(*c*) whether there are any provisions to include the members of the Legislature representing the concerned area on the Board of Directors of the Company ?

*A*.—Sri RAMAKRISHNA HEGDE (Minister for Finance, Planning, Commerce and Industries).—

(*a*) Yes.

(*b*) Directors are elected in accordance with the Articles of Association of the Company and the Companies Act, 1956.

(*c*) No.

ಶ್ರೀಮತಿ ಬಸವರಾಜೇಶ್ವರಿ.—ಈ ಬೋರ್ಡಿನಲ್ಲಿ ಕೆಲಸಮಾಡುವವರು ಯಾರು ? ಅವರ ಹೆಸರು ಸರಕಾರದಿಂದ ನೇಮಕಮಾಡಲ್ಪಟ್ಟಿರುವವರು ಯಾರು ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೂ ಸೇರಿ ಒಟ್ಟು 6 ಜನರಿದ್ದಾರೆ, ಅಧ್ಯಕ್ಷರು ರಾಮಕೃಷ್ಣ ಹೆಗಡೆ. 3 ಜನ ಸರಕಾರಿ ಡೈರೆಕ್ಟರುಗಳಿದ್ದಾರೆ, ಹಣಕಾಸಿನ ಇಲಾಖೆ ಸೆಕ್ರೆಟರಿ, ಮೈನ್ಸ್ ಮತ್ತು ಜಿಯಾಲಜಿ ಇಲಾಖೆ ಡೈರೆಕ್ಟರು, ಸಿಡ್ಡಿ ಜೈಲರ್ ಡೈರೆಕ್ಟರುಗಳಾಗಿದ್ದಾರೆ. ಇಬ್ಬರು ಡೈರೆಕ್ಟರುಗಳು ಷೇರು ಹೋಲ್ಡರುಗಳಿಂದ ಆಯಕೆಯಾಗುತ್ತಾರೆ.

ಶ್ರೀಮತಿ ಬಸವರಾಜೇಶ್ವರಿ.—ಇದರ ಹೆಸರಿಕೆ ಮೈ. ವೀರಪ್ಪ ಎಂಬುವರನ್ನು ನೇಮಕಮಾಡಿರುವುದು ಯಾವ ಆಧಾರದ ಮೇರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಚೆಕ್ಕಿಕರ್ ಅಡ್ವೈಜರು. ಅವರು ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿದ್ದರೆ ಅವರ ಸಲಹೆ ಸಿಕ್ಕಿ ಪ್ರಯೋಜನವಾಗುತ್ತದೆ. ಆದುದರಿಂದ ಅವರನ್ನು ತೆಗೆದುಕೊಳ್ಳಲಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಅಲ್ಲಿ ಮನನನ್ನು ಬಂದ ಹಾಗೆ ಮ್ಯಾನೇಜ್‌ಮೆಂಟ್ ಮಾಡುವುದು ಕೆಲಸಮಾಡುವುದು ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಬಂದಿಲ್ಲ. ಕೆಲವು ವರ್ಷಗಳಿಂದ ಪ್ರತಿಫಲ ನೋಡಿದರೆ ಉತ್ತಮವಾಗಿರುವಂತೆ ಕಾಣುತ್ತದೆ.

ಶ್ರೀಮತಿ ಬಸವರಾಜೇಶ್ವರಿ.—ಈಗಿರುವ ಸೂಪರಿಂಟೆಂಡೆಂಟರನ್ನು ಹಚ್ಚಿ ಚಿನ್ನದ ಗಣಿಯಲ್ಲಿ ಜನರಲ್ ಮ್ಯಾನೇಜರ್ ಎಂದು ಬದಲಾಯಿಸುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಹೇಳುವುದಕ್ಕಾಗುವುದಿಲ್ಲ. ಅವರನ್ನು ಉಪಯೋಗ ಮಾಡಿದರೆ ಅವರಿಗೆ ಅನುಭವವಿರುವುದರಿಂದ ಪ್ರಯೋಜನವಾಗುತ್ತದೆ ಎಂದು ಅವರನ್ನು ನೇಮಕ ಮಾಡಿದೆ.

ಶ್ರೀಮತಿ ಬಸವರಾಜೇಶ್ವರಿ.—ಅವರು ಮೈನಿಂಗ್ ಟೆಸ್ಟ್ ಪಾಸುಮಾಡಿದ್ದಾರೇ? ಅಲ್ಲಿನ ಅನುಕೂಲ ಪಡೆಯುವುದಕ್ಕೆ ಡೆಸಿಗ್‌ನೇಷನ್ ಬದಲಾಯಿಸಿದ್ದಾರೆಂದು ಕಾಣುತ್ತದೆ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಸರಕಾರಿ ಡೈರೆಕ್ಟರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಆದರೆ ಜಾನ್ ಟೈಲರ್ ಕಂಪನಿಯ ಹೆಚ್ಚು ಕೈವಾಡವಿದೆ. ಆದುದರಿಂದ ಸರಿಯಾದ ವ್ಯವಸ್ಥೆಯಾಗಿಲ್ಲ ವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ.

## Foreign Tour of Finance Minister

198. Sri K. H. RANGANATH (Mudigere).—

Will the Chief Minister be pleased to state :—

(*a*) the place or places visited by the Finance Minister during his recent visit abroad and the purpose of his visit ;

(*b*) the money spent by the State Government on his visit ;

(*c*) the outcome of the visit ;

(*d*) the initial amount drawn for the tour abroad by the Finance Minister ?

*A*.—Sri S. NIJALINGAPPA (Chief Minister).—

(*a*) List appended.

*Purpose* :—Foreign collaboration in connection with industrial development in Mysore State.

(*b*) Rs. 28,321-68 including Foreign Exchange of Rs. 7,413-36.